ದಿನಾಂಕಃ 23.08.2025 ರಂದು ಡಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃಶ್ರೀ ಎಂ.ಎಸ್. ವಕೀಲರಿಂದಃ**

5. ನನ್ನ ತಾಯಿಯ ಹೆಸರು ಈರಮ್ಮ. ನಾನು 10 ವರ್ಷಗಳಿಂದ ಬೇಲೂರಿನಲ್ಲಿ ವಾಸ ಇದ್ದೇನೆ. ಅದರ ಪೂರ್ವದಲ್ಲಿ ಮುದಿಗೆರೆ ಗ್ರಾಮದಲ್ಲಿದ್ದೆ. ನಾನು ಮುದಿಗೆರೆ ಗ್ರಾಮದಲ್ಲಿ ವಾಸ ಇದ್ದೆ ಎಂದು ತೋರಿಸಲು ದಾಖಲಾತಿ ಇದೆಯೇ ಎಂದರೆ ಇಲ್ಲ. ಸದರಿ ಸ್ಥಳಕ್ಕೆ ಸಂಬಂಧಪಟ್ಟ ಗುರುತಿನ ಚೀಟಿ ಪಡಿತರ ಚೀಟಿ ಇಲ್ಲವೇ ಎಂದರೆ ಇಲ್ಲ. 33 ವರ್ಷಗಳಿಂದ ಬೇಲೂರು ವಿಳಾಸದಲ್ಲೇ ಎಲ್ಲಾ ದಾಖಲಾತಿಗಳು ಇರುತ್ತವೆ. ಈಗ ನಾನು ಮುದಿಗೆರೆ ಗ್ರಾಮದಲ್ಲಿ ವಾಸ ಇಲ್ಲ ಎಂದರೆ ಸರಿ. ವಂಶವೃಕ್ಷದಲ್ಲಿ ಯಾವ ವಿಳಾಸ ತಿಳಿಸಿದ್ದೀರ ಎಂದರೆ ಬೇಲೂರು. ನಿಡಿ 33 ರಲ್ಲಿ ಮುದಿಗೆರೆ ವಾಸ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅನುಕೂಲಕ್ಕೆ ತಕ್ಕಂತೆ ಎಲ್ಲಾ ದಾಖಲಾತಿಗಳನ್ನು ಒಂದೊಂದು ರೀತಿಯಲ್ಲಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 1974-75 ರಲ್ಲಿ ಗೇಣಿದಾರರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಅಲೂರು ತಹಶೀಲ್ದಾರ್ ರವರು ಸ್ಥಳ ಪರಿಶೀಲಿಸಿ ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಗಿಡ್ಡಯ್ಯ ಬಿನ್ ತಿರುಮಲಯ್ಯರವರ ಹೆಸರಿಗೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಗಿಡ್ಡಯ್ಯರವರ ಮಗ ಸಣ್ಣಗಿಡ್ಡಯ್ಯ ಎಂದರೆ ಸರಿ. ಸಣ್ಣಗಿಡ್ಡಯ್ಯರವರಿಗೆ ಎಷ್ಟು ಜನ ಮಕ್ಕಳು ಎಂದು

ತಿಳಿದುಕೊಂಡಿದ್ದೀರ ಎಂದರೆ ತಿಳಿದುಕೊಂಡಿರುತ್ತೇನೆ. ನಿಡಿ 33 ರಲ್ಲಿ ಸಣ್ಣಗಿಡ್ಡಯ್ಯರವರ ಮಕ್ಕಳ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ. ತಿರುಮಲಯ್ಯರವರಿಗೆ 3 ಜನ ಮಕ್ಕಳು ಅವರ ಹೆಸರು ಗಿಡ್ಡಯ್ಯ, ದಾಸಯ್ಯ, ದಾಸಯ್ಯ. ತಿರುಮಲಯ್ಯರವರಿಗೆ ಇಬ್ಬರೇ ಮಕ್ಕಳು ಎಂದರೆ ಸರಿಯಲ್ಲ. ದಾಸಯ್ಯ ಎಂಬ ಇನ್ನೊಬ್ಬ ಮಗನನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಸಣ್ಣಗಿಡ್ಡಯ್ಯರವರ ಮಕ್ಕಳ ಸ್ವಾಧೀನದಲ್ಲಿರುತ್ತವೆ ಎಂದರೆ ಸರಿಯಲ್ಲ.

6. ಆಲೂರಿನಲ್ಲಿ ರಾಜಪ್ಪ ಎಂಬ ಸ್ನೇಹಿತರು ಇರುತ್ತಾರೆ ಎಂದರೆ ನನ್ನ ತಂಗಿ ಗಂಡ. ನಾನು ಮತ್ತು ಅವರು ಸೇರಿಕೊಂಡು ಪಹಣಿಗಳಲ್ಲಿ ಹೆಚ್.ಬಿ. ರಾಜಪ್ಪ ಬಿನ್ ಬೈರಯ್ಯ ಮತ್ತು ಡಿ. ರಾಜಪ್ಪ ಬಿನ್ ದಾಸಯ್ಯ ಎಂದು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. 1996 ರ ಪೂರ್ವದಲ್ಲಿ ಸಣ್ಣಗಿಡ್ಡಯ್ಯರವರ ವಾರಸುದಾರರ ಹೆಸರಿನಲ್ಲಿ ಖಾತೆ ಇದ್ದು ಅದರ ನಂತರ ದಾಖಲಾತಿಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. 1995-96 ರಲ್ಲಿ ದಾಖಲಾತಿಗಳನ್ನು ನಾನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ದಾಸಯ್ಯ ಮಾಡಿಸಿರುತ್ತಾರೆ. ನಾನು ಹಾಜರುಪಡಿಸಿದ ದಾಖಲಾತಿಗಳು ಸಣ್ಣಗಿಡ್ಡಯ್ಯರವರ ಕುಟುಂಬಕ್ಕೆ ಸೇರಿದ ದಾಖಲಾತಿಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಗಳಿಗೆ ಸೇರಿದ ಸ್ವತ್ತುಗಳು ಎಂದರೆ ಸರಿಯಲ್ಲ. ನಾನು ವಿದ್ಯಾವಂತನಾಗಿರುವ ಕಾರಣ ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು

ನನ್ನ ಹೆಸರಿಗೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.